**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಮ್. ಎಫ್.ಸಿ ನ್ಯಾಯಾಲಯ**

**ತಿ. ನರಸಿಪುರ**

**ಸಿಸಿ ಸಂಖ್ಯೆ 584/2023**

| | | |
|---|---|---|
| ಸಾಕ್ಷಿದಾರರ ಹೆಸರುಃ | ಬಸವಣ್ಣ | ಪ್ರಮಾಣ ವಚನ ಬೋದಿಸಲಾದ |
| ತಂದೆಯ ಹೆಸರುಃ | ಮಹದೇವಯ್ಯ | ದಿನಾಂಕಃ 06.03.2025 |
| ವಯಸ್ಸು | 24 ವರ್ಷ | |
| ವೃತ್ತಿ | ಕೂಲಿ ಕೆಲಸ | ಪಿ.ಡಬ್ಲೂ–1 |
| ವಾಸಃ | ಹ್ಯಾಕನೂರು | ಸಿ.ಡಬ್ಲೂ–1 |

**ಮುಖ್ಯ ವಿಚಾರಣೆಃ ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಊರಿನವರು, ಹಾಗಾಗಿ ನಾನು ಆರೋಪಿತರನ್ನು ನೋಡಿರುತ್ತೇನೆ. ಈ ಪ್ರಕರಣದ ವಿಚಾರ ನನಗೆ ಏನು ಗೊತ್ತಿರುವುದಿಲ್ಲ. ಸಾಕ್ಷಿದಾರರು ದಿನಾಂಕ 14.03.2023 ರ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು **ನಿಪಿ–01** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ–01(ಎ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ದಿನಾಂಕ 14.03.2023 ರ ನೋಟಿಸ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು **ನಿಪಿ–02** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ–02(ಎ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ದಿನಾಂಕ 14.03.2023 ರ ಮಾದರಿ ಮೊಹರಿನ ನಕಲಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು **ನಿಪಿ–03** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ–03(ಎ)** ಎಂದು ಗುರುತಿಸಲಾಯಿತು. ಸದರಿ ನಿಪಿ–01 ರಿಂದ 03 ರ ದಾಖಲಾತಿಗಳಿಗೆ ಅಬಕಾರಿ ಕಛೇರಿಯಲ್ಲಿ ಮಾಡಿರುತ್ತೇನೆ. ನಿಪಿ–01 ರಿಂದ 03 ರ ದಾಖಲಾತಿಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸದರಿ ದಾಖಲಾತಿಗಳಿಗೆ ನನ್ನ ಜೊತೆ ಬೇರೆ ಯಾರು ಸಹಿ

ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಬಕಾರಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ತಪಾಸಣೆ ಮಾಡಿರುವುದಿಲ್ಲ ಮತ್ತು ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಬಾಟಲಗಳನ್ನು ಮತ್ತು ಕ್ಯಾನ್ ಗಳನ್ನು ನಾನು ನೋಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುತ್ತಿದ್ದು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿಸಲಾಯಿತು)**

**ಪಾಟೀ ಸವಾಲುಃ ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 14.03.2023 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಅಬಕಾರಿ ಪೊಲೀಸರು ನನಗೆ ಮತ್ತು ಚಾಸಾ-2 ರವರಿಗೆ ಮಹೇಂದ್ರ ಮ್ಯಾಕ್ಸಿಮೋ 4 ಚಕ್ರದ ಆಟೋವನ್ನು ಪರಿಶೀಲಿಸಬೇಕು ಎಂಬ ವಿಚಾರವನ್ನು ತಿಳಿಸಿ ಅಬಕಾರಿ ಪೊಲೀಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಕೆಎ-45-ಎಂ-2426 ಆಟೋವನ್ನು ಪರಿಶೀಲಿಸಿದ್ದರು ಎಂದರೆ ಸರಿಯಲ್ಲ. ಅಬಕಾರಿ ಪೊಲೀಸರು ಸದರಿ ಆಟೋವನ್ನು ಪರಿಶೀಲಿಸಿದ್ದಾಗ ಸದರಿ ವಾಹನದ ಮುಂದಿನ ಸೀಟಿನಲ್ಲಿ 3 ರಟ್ಟಿನ ಪೆಟ್ಟಿಗೆಗಳು ಇದ್ದು, ಅವುಗಳನ್ನು ತೆರೆದು ನೋಡಲಾಗಿ 650 ಎಂ.ಎಲ್ ನ ರಾಯಲ್ ಚಾಲೆಂಜ್ ಸ್ಟ್ರಾಂಗ್ ಬಿಯರ್ ಎಂದು ನಮೂದಾಗಿರುವ 24 ಬಾಟಲ್ ಗಳು, 500 ಎಂ.ಎಲ್ ನ ಪವರ್ ಪುಲ್ ಸ್ಟ್ರಾಂಗ್ ಬಿಯರ್ ಎಂದು ನಮೂದಾಗಿರುವ 24 ಕ್ಯಾನ್ ಗಳು ಕಂಡು ಬಂದವು ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ ಇದ್ದ ಚಾಲಕನ ಹೆಸರು ಮನು ಬಿನ್ ಮಹದೇವಯ್ಯ ಎಂದರೆ ನನಗೆ ಗೊತ್ತಿಲ್ಲ. ನಂತರ ಅಬಕಾರಿ ಪೊಲೀಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಬೆಳಿಗ್ಗೆ 9.30 ರಿಂದ 11.00 ಗಂಟೆವರೆಗೂ ಪಂಚನಾಮೆಯನ್ನು ಜರುಗಿಸಿ ಸದರಿ ಮದ್ಯವನ್ನು ಮತ್ತು ಕೆಎ-45-ಎಂ-2426 ಆಟೋವನ್ನು ಅಮಾನತ್ತುಪಡಿಸಿಕೊಂಡು 1 ನೇ ಆರೋಪಿಯನ್ನು ತಮ್ಮ ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ನಂತರ ಸದರಿ ಮದ್ಯದಲ್ಲಿ 650 ಎಂ.ಎಲ್ ನ ರಾಯಲ್ ಚಾಲೆಂಜ್ ಸ್ಟ್ರಾಂಗ್ ಬಿಯರ್ ಎಂದು ನಮೂದಾಗಿರುವ 12 ಬಾಟಲ್ ಗಳು, 500 ಎಂ.ಎಲ್ ನ ಪವರ್

ಫುಲ್ ಸ್ಟ್ರಾಂಗ್ ಬಿಯರ್ ನ 24 ಕ್ಯಾನ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿ ಬಿಳಿ ಬಟ್ಟೆಯಿಂದ ಸುತ್ತಿ ಮೊಹರು ಮಾಡಿದ್ದರು ಎಂದರೆ ಸರಿಯಲ್ಲ. ನಾನು ಈಗ ಹೇಳಿದಂತೆ ಅಬಕಾರಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಸದರಿ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ, ಸದರಿ ಅಲ್ಲಗೆಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು **ನಿಪಿ-04** ಎಂದು ಗುರುತಿಸಲಾಯಿತು. ಈ ಮೇಲ್ಕಂಡಂತೆ ತಿಳಿಸಿದ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಆರೋಪಿಯು ನಮ್ಮ ಊರಿನವರಾಗಿರುವುದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ರವರಿಂದಃ ಇರುವುದಿಲ್ಲ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

ಓ.ಹೇ.ಕೇ.ಸ. ಇದೆ.,

**ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಲಯ, ತಿ. ನರಸೀಪುರ.**